# ಸ್ಮೈಟ್ ಶಾಲೆಗಳಲ್ಲಿ ಶೇ.100 ಫಲಿತಾಂಶ

■ ವಿಕ ಸುದ್ದಿಲೋಕ ಮಾಗಡಿ

ಇಲ್ಲಿನ ಸಿದ್ಧಗಂಗಾ ಮಠದ ಐದು ಪ್ರೌಢಶಾಲೆಗಳಿಂದ ಬೆಂಗಳೂರಿನ ಎಸ್‌ಎಂ ಎಜುಕೇಷನ್ ಟ್ರಸ್ಟ್ (ಸ್ಮೈಟ್) ದತ್ತು ತೆಗೆದುಕೊಂಡಿದ್ದ 50 ವಿದ್ಯಾರ್ಥಿಗಳು ಶೇ.100 ಫಲಿತಾಂಶ ಗಳಿಸಿದ್ದಾರೆ ಎಂದು ಸಂಸ್ಥೆಯ ಶೋಭಾ ಸೋಮಶೇಖರ್ ತಿಳಿಸಿದರು.

ಇಲ್ಲಿನ ಬ್ಯಾಲಕೆರೆಯ ಜಯಣ್ಣ ಅವರ ವನಧಾಮದಲ್ಲಿ ನಡೆದ ಫಲಿತಾಂಶ ಮತ್ತು ಸಾಧನೆ ಕುರಿತು ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ಹತ್ತನೆಯ ತರಗತಿಯ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿ ತಿಂಗಳು 500 ರೂ. ಶಿಷ್ಯವೇತನ ಹಾಗೂ ನುರಿತ ಶಿಕ್ಷಕರಿಂದ ವಿಶೇಷ ಪಾಠ ಬೋಧನೆ ನೀಡುತ್ತಿರುವುದು ಹೆಚ್ಚು ಪ್ರಯೋಜನಕಾರಿಯಾಗಿದೆ ಎಂದರು.

ಸ್ಮೈಟ್ ಸಂಸ್ಥೆಯ ಕಾರ್ಯಕಾರಿ ಸಮಿತಿ ನಿರ್ದೇಶಕ ಡಾ. ವಸುಪ್ರಕಾಶ್ ಮಾತನಾಡಿ, ನಮ್ಮ ಸೇವೆಯ ಗುರಿ, ಉದ್ದೇಶಗಳನ್ನು ಶಾಲಾ ಮುಖ್ಯಸ್ಥರು, ಶಿಕ್ಷಕರು, ಸಿಬ್ಬಂದಿ, ಮಕ್ಕಳು, ಪೋಷಕರು ಮನಗಂಡಿರುವುದೇ ಶೇ. 100 ಫಲಿತಾಂಶಕ್ಕೆ ಕಾರಣವಾಗಿದೆ. ಆದರಿಂದ ಉತ್ತೇಜಿತರಾಗಿ ಮತ್ತೆ ಹೆಚ್ಚುವರಿ ಐದು ಮಠದ ಶಾಲೆಗಳಿಂದ 50 ವಿದ್ಯಾರ್ಥಿಗಳನ್ನು ದತ್ತು ತೆಗೆದುಕೊಳ್ಳಲು ನಿರ್ಧರಿಸಲಾಗಿದೆ ಎಂದರು.

ಬ್ಯಾಲಕೆರೆ ಶಾಲಾ ಮುಖ್ಯಸ್ಥ ನಾರಾಯಣ್ ಮಾತನಾಡಿ, ಸೋಲೂರು, ನಾರಸಂದ್ರ, ಗುಡೇಮಾರನಹಳ್ಳಿ, ಗಟ್ಟಿಪುರ ಮತ್ತು ಬ್ಯಾಲಕೆರೆ ಮಕ್ಕಳಿಗೆ ನೀಡುತ್ತಿದ್ದ ಸ್ಮೈಟ್ ಶಿಷ್ಯವೇತನ ಮತ್ತು ಬೋಧನೆ ಈ ಸಾಲಿನಿಂದ ಕುದೂರು ಮಹಂತೇಶ್ವರ , ಕಂಚುಗಲ್ ಬಂಡೇಮಠ, ಹುಲಿಕಲ್, ಬಸವೇಶ್ವರ, ಎಣ್ಣೆಗೆರೆ ಪ್ರೌಢಶಾಲೆಗಳಿಂದ 51 ವಿದ್ಯಾರ್ಥಿಗಳು ಸೌಲಭ್ಯ ಪಡೆಯಲಿದ್ದಾರೆ ಎಂದು ಘೋಷಿಸಿದರು.

ಸೋಲೂರು ಪ್ರೌಢಶಾಲಾ ಮುಖ್ಯಸ್ಥ ಸೋಮಯ್ಯ ಮಾತನಾಡಿ, ಫಲಿತಾಂಶ ಮತ್ತು ಶಿಷ್ಯವೇತನ ಉಪಯೋಗ ಪಡೆಯಲು ಈ ಸಾಲಿನಿಂದ ದಾಖಲು ಅಧಿಕವಾಗುತ್ತಿರುವುದರಿಂದ 9ನೇ ತರಗತಿಯಲ್ಲಿ ಪ್ರತಿಭಾನ್ವಿತರಿಗೂ ಮಾಸಿಕ ಸಹಾಯ ಧನ 500ರೂ.ಗಳನ್ನು ನೀಡಲು ನಿರ್ಧರಿಸಿರುವುದು ಸ್ವಾಗತಾರ್ಹ ಎಂದರು.

ದಿಲ್ಲಿಯ ಯುವಕ ಶೋಷನ್, ಸೋಲೂರಿನ ಚಂದ್ರಶೇಖರಯ್ಯ, ಎಣ್ಣೆಗೆರೆ ಬಸವರಾಜಯ್ಯ, ಬಂಡೇಮಠದ ಸಿದ್ದಪ್ಪ, ಗಟ್ಟಿಪುರದ ಶಿವಣ್ಣ, ಹುಲಿಕಲ್‌ನ ನಂಜಾಮರಿ, ಕುದೂರಿನ ನರಸಿಂಹರೆಡ್ಡಿ, ಹಾಲು ಉತ್ಪಾದಕರ ಸಂಘದ ಮರುಳಸಿದ್ದಯ್ಯ ಭಾಗವಹಿಸಿದ್ದರು.

## ಗ್ರಾಮೀಣ ಪ್ರತಿಭೆಗೆ ಸ್ಮೈಟ್ ಪ್ರಶಸ್ತಿ

**ಮಾಗಡಿ:** ಇಲ್ಲಿನ ಬ್ಯಾಲಕೆರೆ ಪ್ರೌಢಶಾಲೆ ಸೇರಿದಂತೆ ಐದು ಪ್ರೌಢಶಾಲೆಗಳಿಂದ ಸ್ಮೈಟ್ ದತ್ತು ಯೋಜನೆಯಲ್ಲಿ ವೇದಾವತಿ ಶೇ.86 ಫಲಿತಾಂಶ ಸಾಧಿಸಿದ್ದಾಳೆ.

ತಂದೆ ತಿಗಳ ಸಮಾಜದವರಾಗಿದ್ದು ತೋಟ ಮಾಡಲು ತುಂಡುಭೂಮಿಯೂ ಅವರಿಗೆ ಇಲ್ಲ, ಟೈಲರಿಂಗ್ ಮೂಲಕ ಜೀವನ ಸಾಗಿಸುವ ಗೋವಿಂದಯ್ಯನಿಗೆ ಇಬ್ಬರು ಮಕ್ಕಳು.

ಹಿರಿಮಗಳು ವೇದಾವತಿ 8ನೇ ತರಗತಿವರೆಗೂ ಓದಿ ಬಡತನದ ಬೇಗುದಿಯಿಂದ ಶಾಲೆ ತೊರೆದು ಎರಡು ವರ್ಷಗಳಾಗಿದ್ದವು. ಶಾಲೆಗೆ ಹೊಸ ಮುಖ್ಯ ಶಿಕ್ಷಕ ನಾರಾಯಣ್ ಅವರು ಬಂದ ನಂತರ ಶಾಲೆ ಬಿಟ್ಟ ಮಕ್ಕಳ ಬಗ್ಗೆ ಅಧ್ಯಯನ ಮಾಡಿ ಮರುದಾಖಲು ಮಾಡಿಕೊಂಡರು.

ಆದೇ ವೇಳೆಗೆ ಸ್ಮೈಟ್ ಶಿಷ್ಯವೇತನ ಬೋಧನೆ ಯೋಜನೆಗೆ ಪ್ರತಿಭಾನ್ವಿತ ವಿದ್ಯಾರ್ಥಿನಿ ಆಯ್ಕೆಯಾದಳು. ವಿಶೇಷ ತರಗತಿ ಗಳಿಗೆ ಸೇರಿಕೊಂಡ ವೇದಾವತಿ, 2 ವರ್ಷ ಶಾಲೆಗೆ ಹೋಗದೆ ಮರೆತ ವಿಷಯ ಕುರಿತು ಪ್ರಶ್ನೆಗಳ ಮೂಲಕ ಉತ್ತರ ಕೇಳಿ ಪಡೆದು ಓದಿ ಗ್ರಾಮೀಣ ಭಾಗದ ಪ್ರತಿಭೆಗಳಿಗೆ ನೀಡುವ ಸ್ಮೈಟ್ ಪ್ರಶಸ್ತಿಗೂ ಆಯ್ಕೆಯಾಗಿದ್ದಾಳೆ. ಜುಲೈ ತಿಂಗಳಲ್ಲಿ ಬ್ಯಾಲಕೆರೆಯಲ್ಲಿ ನಡೆಯಲಿರುವ ನಾನಾ ಸಾಂಸ್ಕೃತಿಕ, ಸಾಹಿತ್ಯಕ, ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ವೇದಾವತಿಗೆ ಪ್ರಶಸ್ತಿ ನೀಡುವುದಾಗಿ ಡಾ. ವಸುಪ್ರಕಾಶ್, ಸೋಮಶೇಖರ್ ಹೇಳಿಕೆಯಲ್ಲಿ ತಿಳಿಸಿದ್ದಾರೆ.

